ಆ ಮನೆಗಳನ್ನು ಕಟ್ಟುವುದಕ್ಕೆ ಜಾಗವನ್ನು ತೆಗೆದುಕೊಂಡಿದ್ದಾರೋ ಅದು ನನಗೆ ಗೊತ್ತಿಲ್ಲ. ಆದರೂ ಈ ವಿಷಯದ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಯವರಿಂದ ವರದಿಯನ್ನು ತರಿಸಿಕೊಂಡು ತಮಗೆ ತಿಳಿಸುತ್ತೇನೆ.

Loan and subsidy given to Industries in the State by the Khadi and Village Industries Board.

Sri L. T. Thimmappa Hegde (Sagar)--

616 (1281) Will the Minister for Industries be pleased to state :--

(a) the number of Industries functioning with the help of loan and subsidy provided by the Karnataka State Khadi and Village Industries Board in the State (Details) ;

(b) out of them, the number of Industries which are in sound conditions and repaying loan ;

(c) the number of Industries which are not repaying the loans and the number of new Industries started during the last one year and the number of old Industries to which loan and subsidy have been given ?

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ,—ಮಾನ್ಯ ಅಧ್ಯಕ್ಷರೇ ಒಟ್ಟು 8864 ಘಟಕಗಳಲ್ಲಿ 75 ಘಟಕಗಳು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಇದರಿಂದಾಗಿ ಎಷ್ಟು ಹಣ ಹೋಯಿತು. ಈ ಹಣವನ್ನು ವಸೂಲು ಮಾಡಲಿಕ್ಕೆ ಸಾಧ್ಯವಾಗಲಿಲ್ಲವೇ ? ಪೂರ್ತಿ ಹಣ ಹೋಯಿತೇ ಎನ್ನುವ ವಿಚಾರವನ್ನು ಹೇಳಬೇಕು, ಎರಡನೆಯದಾಗಿ, 3,816 ಘಟಕಗಳು ಸುಸ್ಥಿತಿಯಲ್ಲಿ ಇದ್ದು. ಇನ್ನು 5048 ಘಟಕಗಳು ಸುಸ್ಥಿತಿಯಲ್ಲಿ ಇಲ್ಲವೆಂದರೆ ಅವು ಮುಳಿಗಿ ಹೋದ ಹಾಗೆಯೇ ಸರಿ ಎಂದು ಹೇಳುತ್ತೀರಾ? ಅಥವಾ ಮರುಪಾವತಿ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದಕ್ಕೆ ವಿವರಗಳನ್ನು ಕೊಡಬೇಕು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತೇವೆಂದು ಖಾದಿ ಕಮಿಷನ್‌ರವರು ಹೇಳುತ್ತಿರುವಾಗ, ರಾಜ್ಯದಲ್ಲಿ ಖಾದಿ ಗ್ರಾಮೋದ್ಯೋಗ ಮಂಡಲಿಯವರು ಸರಿಯಾಗಿ ಕೆಲಸ ಮಾಡದೆಹೋದರೆ ಅನುದಾನ ಪಡೆಯುವಲ್ಲಿ ಅವರು ಹಿಂದೆ ಬೀಳತಕ್ಕಂಥ ಪರಿಸ್ಥಿತಿ ಉದ್ಭವವಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.---ಕೆಲಸ ನಿಲ್ಲಿಸಿರತಕ್ಕಂಥ ಘಟಕಗಳಿಂದ ಮಾತ್ರ ಮರುಪಾವತಿ ಮಾಡತಕ್ಕಂಥದ್ದು ಇರುತ್ತದೆ. ಮರುಪಾವತಿ ಮಾಡಲು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದೇವೆ, ನೋಟೀಸ್ ಕೊಟ್ಟಿದ್ದೇವೆ, ಆಸ್ತಿಯನ್ನು ಮುಟ್ಟುಗೋಲು ಮಾಡಿಕೊಂಡಿರುತ್ತೇವೆ. ಆದರೆ ಇದರಲ್ಲಿ ಕೆಲವೊಂದು ತಿದ್ದುಪಡಿಗಳು ಆಗತಕ್ಕಂಥದ್ದು ಅವಶ್ಯಕತೆ ಇರುತ್ತದೆ, ಅದು ಮುಂದಿನ ವರ್ಷ ಬರುತ್ತದೆ. ಹಣವನ್ನು ವಸೂಲು ಮಾಡುವುದಕ್ಕಾಗಿ ಅಧಿಕಾರ ಮತ್ತು ಕಾನೂನು ಎರಡನ್ನೂ ಅಧಿಕಾರಿಗಳಿಗೆ ಕೊಡಬೇಕಾಗಿದೆ, ಮತ್ತೆ ಈ ವರ್ಷ ಹೆಚ್ಚಿನ ಸಂಸ್ಥೆಗಳಿಗೆ ಹಣವನ್ನು ಒದಗಿಸಿಕೊಡತಕ್ಕಂಥ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಮತ್ತೆ ಖಾದಿ ಕಮೀಷನ್ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ಖಾದಿ ಬೋರ್ಡ್ ಎರಡು ವರ್ಷಗಳಿಂದ ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿರುತ್ತದೆ. ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಖಾದಿ ಕಮಿಷನ್‌ನಿಂದ ಪಡೆದುಕೊಳ್ಳಲು ಪ್ರಯತ್ನ ಪಡುತ್ತೇವೆಂದು ತಿಳಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಖಾದಿ ಗ್ರಾಮೋದ್ಯೋಗದ ಬಗ್ಗೆ ಉತ್ತರ ಕರ್ನಾಟಕದ ಕಡೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿದ್ದು, ಹಳೇ ಮೈಸೂರು ಕಡೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿಲ್ಲವೆನ್ನುವ ದೂರು ಬಂದಿರತಕ್ಕಂಥದ್ದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್, ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಹೆಚ್ಚಿನ ಸಹಾಯ ಉತ್ತರ ಕರ್ನಾಟಕಕ್ಕೆ ಹೋಗುತ್ತಿದ್ದು, ದಕ್ಷಿಣ ಕರ್ನಾಟಕಕ್ಕೆ ಕಡಿಮೆ ಎನ್ನುವ ಮಾತು ಸರಿಯಲ್ಲ. ಎಲ್ಲಿ ಜನ ಮುಂದೆ ಬರುತ್ತಾರೋ ಅವರಿಗೆ ಕೊಡುತ್ತಿದ್ದೇವೆ, ಒಂದು ಸಮತೋಲನದ ದೃಷ್ಟಿಯಿಂದ ಕಾನೂನಿನಲ್ಲಿಯೇ ಬದಲಾವಣೆಯನ್ನು ಮಾಡಬೇಕೆಂದು ಹೇಳಿ ಒಂದು ಸಮಿತಿಯನ್ನು ಮಾಡಿದ್ದೇವೆ. ಈ ಮಂಡಲಿಯ ಮೂಲಕ ಎಲ್ಲಾ ಜಿಲ್ಲೆಗಳಿಗೂ ಖಾದಿ ಗ್ರಾಮೋದ್ಯೋಗದ ಲಾಭವನ್ನು ಪಡೆಯುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಇದಕ್ಕೆ ಒಂದು ಸಮಗ್ರವಾದ ಕಾನೂನು ಬರುತ್ತದೆಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್, ನಾಗರತ್ನಮ್ಮ.—ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಖಾದಿ ಬೋರ್ಡ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿ ಸರ್ಟಿಫಿಕೇಟ್ ಕೊಟ್ಟರು. ಆದರೆ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ನೌಕರರಿಗೆ ವೇತನವನ್ನು ಕೊಡುತ್ತಿರುವುದನ್ನು ನೋಡಿದರೆ, 150-200-300 ಈ ರೀತಿಯಾಗಿ ಕೊಡುತ್ತಿರುತ್ತಾರೆ. ಜಾಸ್ತಿ ವೇತನವನ್ನು ಕೇಳಿದರೆ ಹೊರಟು ಹೋಗಿ ಎಂದು ಹೇಳುತ್ತಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿರುತ್ತದೆಯೇ? ಎರಡನೆಯದಾಗಿ ಮಷಿನರಿಗಳಿಗೆ ಆರ್ಡರ್‌ನ್ನು ಪ್ಲೇಸ್ ಮಾಡುವಾಗ ಎರಡೆರಡು ರಸೀತಿಗಳನ್ನು ಹಾಕಿರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿರುತ್ತದೆಯೆ ? ಅದು ಸಾಬೀತಾದರೆ ಏನು ಮಾಡುತ್ತೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಲ್ಲಿ ಕೆಲಸ ಮಾಡುತ್ತಿರತಕ್ಕಂಥವರಿಗೆ ಯಾರು ಯಾರು, ಯಾವರೀತಿ ಸಂಬಳವನ್ನು ಪಡೆಯುತ್ತಿರುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಲ್ಲಿ ಹಲವಾರು ಸಂಸ್ಥೆಗಳ ಕೆಲಸಗಾರರು ಕೆಲಸವನ್ನು ಮಾಡುತ್ತಿರುತ್ತಾರೆ. ಅವರು ಖಾದಿ ಬೋರ್ಡ್ ನವರಲ್ಲ. ಆದರೂ ಕೂಡ ಅವರಂತೆಯೇ ಸಂಬಳ ಕೊಡಬೇಕೆಂಬುದು ಸರ್ಕಾರದ ಅಭಿಪ್ರಾಯವಿದೆ. ಅವರೂ ಕೂಡ ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ವ್ಯವಸ್ಥೆ ಮಾಡುತ್ತೇನೆ. ಅಲ್ಲಿ ಕೆಲಸ ಎಲ್ಲಾ ಸರಿಯಾಗಿ ಚೆನ್ನಾಗಿಯೇ ನಡೆಯುತ್ತಿದೆ. ಇದರಿಂದಾಗಿ ಸ್ವಲ್ಪ ಸುಧಾರಣೆಯನ್ನು ಮಾಡುವಸಲುವಾಗಿ ಕಾನೂನನ್ನೆ ಬದಲಾವಣೆ ಮಾಡಬೇಕೆಂದು ವಿಚಾರಣೆಯೂ ಕೂಡ ಆಗಿದೆ. ಸಮಿತಿಯ ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ಹೇಳಿದ್ದು ಸತ್ಯ ಇರುತ್ತದೆ· ವಿಚಾರಣೆಯಾಗಿ ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿಲ್ಲ. 754 ಘಟಕಗಳು ಮುಚ್ಚಿಹೋಗಿರುವುದರಿಂದ ಎಷ್ಟು ಹಣ ಹೋಯಿತು ವೆಂಬ ಬಗ್ಗೆ ಹೇಳಲಿಲ್ಲ. 3814 ಘಟಕಗಳಿಂದ ಮಾತ್ರ ಮರುಪಾವತಿಯಾಗುತ್ತಿದೆ ಎಂದು ಹೇಳಿದ್ದಾರೆ ಇನ್ನು 5048 ಘಟಕಗಳಿಂದ ಮರುಪಾವತಿಯಾಗದಿರುವುದರಿಂದ ಎಷ್ಟು ಹಣ ಹೋಯಿತು ಎಂಬುದನ್ನು ಹೇಳಲಿಲ್ಲ. ಮತ್ತೆ ಈ ಘಟಕಗಳನ್ನು ಪುನಃ ಶ್ವೇತನ ಗೊಳಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿರುತ್ತೀರೆಂಬುದಕ್ಕೆ ಉತ್ತರವನ್ನು ಹೇಳಲಿಲ್ಲ. ಇದರಿಂದಾಗಿ ಖಾದಿ ಕಮಿಷನ್ ನಿಂದ ರಾಜ್ಯಕ್ಕೆ ಬರತಕ್ಕಂಥ ಹಣ ಕಡಿಮೆಯಾಗುವುದಿಲ್ಲವೇ? ಇಷ್ಟಕ್ಕೂ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಚ್ಚಿಹೋದ ಘಟಕಗಳಿಂದ ಬರಬೇಕಾಗಿರತಕ್ಕಂಥ ಹಣ ಸುಮಾರು ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು. ಮತ್ತೆ 4294 ಘಟಕಗಳಿಂದ ಮರುಪಾವತಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.—ಮುಚ್ಚಿರುವ ಘಟಕಗಳನ್ನು ಪುನಶ್ವೇತನಗೊಳಿಸಲು ಸಹಾಯವನ್ನೇನಾದರೂ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ ಸಂಸ್ಥೆಗಳು ತಾಂತ್ರಿಕ ತೊಂದರೆಯಿಂದ, ಮತ್ತು ಹಣಕಾಸಿನ ಮುಗ್ಗಟ್ಟಿನಿಂದ ಮುಚ್ಚಲ್ಪಟ್ಟವೆ ಅವನ್ನು ಪುನಶ್ವೇತನಗೊಳಿಸಲು ಕ್ರಮ ಕೈಗೊಂಡಿದ್ದಕ್ಕೆ ವಿವರಗಳು ಇಲ್ಲ. ಬೇಕಿದ್ದರೆ ವಿವರಗಳನ್ನು ತರಿಸಿಕೊಡುತ್ತೇನೆ.